ಅವಕಾಶ ಇದೆ. ಕಾಲೇಜಿಗೆ ಪ್ರವೇಶ ಪಡೆಯುವ ಸಂದರ್ಭದಲ್ಲಿ ಪ್ರಬಂಧ ಬರೆಯೋದು ತುಂಬಾ ಮುಖ್ಯ. ಅದೊಂದು ರೀತಿಯಲ್ಲಿ ನಮ್ಮ ಬದುಕಿನ ಕಥೆಯನ್ನು ಪ್ರಸ್ತುತಪಡಿಸಿದಂತೆ. ಮಿನ್ನೆಸೋಟಾದಲ್ಲಿ ಹುಟ್ಟಿ ಬೆಳೆದಿದ್ದರೂ ಭಾರತದ ಹಿನ್ನೆಲೆಯೊಂದಿಗೆ ನನ್ನ ಮಗಳು ಗುರ್ತಿಸಿಕೊಳ್ಳುತ್ತಾಳೆ. ಬಹುಶಃ, ತನಗೆ ಸೀಟು ಸಿಗಲಿಕ್ಕಾಗಿ ಬೇರೆ ರೀತಿ ಗುರ್ತಿಸಿಕೊಳ್ಳುವುದು ಅಗತ್ಯ ಎನ್ನುವ ಪ್ರಾಯೋಗಿಕ ಮನೋಭಾವವೂ ಇರಬಹುದು.

ಹಿಂದಿನ ತಲೆಮಾರಿನವರು ಬಹುಬೇಗ ಬೆರೆತುಹೋಗುತ್ತಿದ್ದರು. ಅಮೆರಿಕದ ಆಹಾರಕ್ಕೆ ಬೇಗ ಒಗ್ಗಿ, ಮದುವೆಗಳಂಥ ಸಂಬಂಧಗಳೂ ಬೇಗ ಆಗಿಬಿಡುತ್ತಿದ್ದವು. ಈಗ ನಮ್ಮದೇ ಸಮುದಾಯ ಸೃಷ್ಟಿಯಾಗಿರುವಾಗ ನಮ್ಮ ಹುಡುಗ, ಹುಡುಗಿ ನೋಡುವ ಪರಿಪಾಠ ಶುರುವಾಗಿದೆ. ಅದು ಮುಖ್ಯವಾಹಿನಿಗೆ ಕಿರಿಕಿರಿ ಉಂಟುಮಾಡುವ ಸಂಗತಿ. ನಮ್ಮ ಜೊತೆ ಹೊಂದಿಕೊಂಡು ಬದುಕಲು ಬಂದವರು ಪ್ರತ್ಯೇಕವಾಗಿ ಬದುಕುವುದನ್ನು ಕಲ್ಪಿಸಿಕೊಳ್ಳುವುದು ಕಷ್ಟ. ಉದ್ಯಾನವೊಂದಕ್ಕೆ ಬಂದರೆ, ಅಲ್ಲಿ ಬರೀ ಚೂಡಿದಾರ್‌ಗಳನ್ನೋ ಹಿಜಾಬ್‌ಗಳನ್ನೋ ಕಂಡರೆ ನಾವೇ ಹೊರಗಿನವರಂತೆ ಕಾಣಿಸುತ್ತೇವಲ್ಲ ಎನ್ನುವ ಆತಂಕ ಅವರದು. ‘ಗ್ರೇಟ್ ಅಮೆರಿಕ’ ಎನ್ನುವ ಟ್ರಂಪ್ ಕಾರ್ಡ್ ಹುಟ್ಟಿಕೊಂಡಿದ್ದು ಹೀಗೆ. ಇಲ್ಲಿನ ಪರಿಸ್ಥಿತಿ ಕೂಡ ತುಂಬಾ ಭಿನ್ನವೇನಲ್ಲ.

**● ಕರ್ಮಭೂಮಿಯಿಂದ ಒಂಚೂರು ಕನ್ನಡನಾಡಿಗೆ ಬನ್ನಿ. ನಿಮ್ಮ ಹೆಸರಿನೊಂದಿಗೆ ತಳಕು ಹಾಕಿಕೊಂಡಿರುವ ಕಾಗಿನೆಲೆಗೂ ನಿಮಗೂ ಏನು ಸಂಬಂಧ?**

ಕಾಗಿನೆಲೆ ನಮ್ಮ ಪೂರ್ವಿಕರ ಊರು. ಅದು ಹೆಸರಿನಲ್ಲಷ್ಟೇ ಉಳಿದುಕೊಂಡಿದೆ. ಅಪ್ಪ ಅಮ್ಮ ಇಬ್ಬರೂ ಶಿವಮೊಗ್ಗದವರು. ನಾನು ಹುಟ್ಟಿ ಬೆಳೆದದ್ದು ನಾಗಮಂಗಲದಲ್ಲಿ. ಅಪ್ಪ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯಲ್ಲಿದ್ದವರು. ಅಮ್ಮ ಟೀಚರ್. ಈಗ ನಾನು ನಾಗಮಂಗಲಕ್ಕೆ ಹೋಗುವುದು ವಿಜಿಟರ್ ರೂಪದಲ್ಲಿ. ‘ವಸಂತಲಕ್ಷ್ಮಿ ಟೀಚರ್ ಮಗ’ ಎನ್ನುವುದು ಅಲ್ಲಿನ ನನ್ನ ಐಡೆಂಟಿಟಿ. ನಮ್ಮ ಕಾಲೇಜಿಂದ ಎಂಬಿಬಿಎಸ್‌ಗೆ ಮೊದಲು ಹೋದವನು ನಾನು. ನಟ ಮಂಡ್ಯ ರಮೇಶ್ ನನಗಿಂತಲೂ ಎರಡು ಮೂರು ವರ್ಷ ಸೀನಿಯರ್. ನಾಗಮಂಗಲ ಸಾಂಸ್ಕೃತಿಕವಾಗಿ ತುಂಬಾ ಕ್ರಿಯಾಶೀಲವಾದ ಊರು. ಈಗ ನಾನು ನಾಗಮಂಗಲಕ್ಕೆ ಹೋದರೆ ನನ್ನ ನೆನಪುಗಳು ಅಲ್ಲಿಯೇ ನಿಂತಿವೆ. ‘ವಸಂತಲಕ್ಷ್ಮಿ ಟೀಚರ್ ಮಗ’ ಎನ್ನುವಷ್ಟಕ್ಕೆ ನನ್ನ ಬಗ್ಗೆ ಊರಿನವರ ನೆನಪುಗಳೂ ನಿಂತಿವೆ. ಆದರೆ, ಹುಟ್ಟಿ ಬೆಳೆದ ಊರಿನೊಂದಿಗೆ ಭಾವನಾತ್ಮಕ ಸಂಬಂಧ ಎಂದಿಗೂ ಹೋಗಲ್ಲ.

**● ನಿಮ್ಮ ಕಥೆಗಳಲ್ಲಿ ನಾಗಮಂಗಲ ಕಾಣಿಸಿಕೊಳ್ಳುತ್ತೆ. ಆದರೆ, ಕಾದಂಬರಿಗಳಲ್ಲಿ ಅಮೆರಿಕ ಕಾಣಿಸಿಕೊಳ್ಳುತ್ತೆ. ಏಕೆ?**

ಬರಹಗಾರನಾಗಿ ನನ್ನ ಮೂಲದ್ರವ್ಯ ನಾಗಮಂಗಲದ್ದು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಅಲ್ಲಿನ ಭಾವಪ್ರಪಂಚ ನನ್ನೊಳಗೆ ಬೆಳೆದಿದೆ. ಅಲ್ಲಿನಿಂದಲೇ ನಾನು ಜಗತ್ತನ್ನು ನೋಡುವುದು. ಅಲ್ಲಿನ ಅನುಭವಗಳು ತುಂಬಾ ಗಟ್ಟಿಯಾದವು. ಆ ಅನುಭವಗಳನ್ನು ಬರೆದರೆ ದೊಡ್ಡ ಕಾದಂಬರಿ ಬರೆಯಬಹುದು. ಆದರೆ, ಅದನ್ನು ಈಗ ಬರೆಯುವುದು ಸಾಧ್ಯವಾಗುತ್ತಿಲ್ಲ. ಬರೆದರೆ ಅದು ನಾಸ್ಟಾಲ್ಜಿಯಾ ಆಗಬಹುದು. ಅವುಗಳನ್ನು ಬರೆಯಲುಹೊರಟರೆ, ಆ ಅನುಭವಗಳನ್ನು ಕೈಯಿಂದ ಮುಟ್ಟುತ್ತಿಲ್ಲ; ಕೋಲಿನ ತುದಿಯಿಂದ